ಮೈಸೂರು ವಿಶ್ವವಿದ್ಯಾನಿಲಯ

# ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ, ಮೈಸೂರು

[Centre for Science Education in Schools]

ಮೈಸೂರು ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿರುವ

## ವಿಜ್ಞಾನ ಕಲಿಕಾ ಸ್ಪಂದನ ಶಿಬಿರ–2023

**ಉದ್ಘಾಟನೆ**

**ಪ್ರೊ. ಎನ್. ಕೆ. ಲೋಕನಾಥ್**

ಸನ್ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಮುಖ್ಯ ಅತಿಥಿಗಳು**

**ಶ್ರೀಮತಿ ಭಾರತಿ**

ಜಂಟಿನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

**ಶ್ರೀ. ರಾಮಚಂದ್ರ ರಾಜೇ ಅರಸ್**

ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

**ಅಧ್ಯಕ್ಷತೆ**

**ಪ್ರೊ. ಪಿ. ವೆಂಕಟರಾಮಯ್ಯ**

ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ ಮತ್ತು
ಅಧ್ಯಕ್ಷರು, ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ, ಮೈಸೂರು

For Circulation

ಎಲ್ಲರಿಗೂ ಆದರದ ಸ್ವಾಗತ

**ಸ್ಥಳ:** ಐನ್‌ಸ್ಟೈನ್ ಸಭಾಂಗಣ, ಭೌತಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು

**ದಿನಾಂಕ:** 19–06–2023 **ಸಮಯ:** 10:30 ಗಂಟೆಗೆ

ಪ್ರೊ.ಎಂ.ಎಸ್.ಚಂದ್ರಶೇಖರ, ಸಂಚಾಲಕರು
ಮತ್ತು ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ ಸದಸ್ಯರುಗಳು

Scanned with OKEN Scanner

ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ, ಮೈಸೂರು

[Centre for Science Education in Schools]

# ವಿಜ್ಞಾನ ಕಲಿಕಾ ಸ್ಪಂದನ ಶಿಬಿರ–2023

| INAUGURAL PROGRAM | | | | |
|---|---|---|---|---|
| **Invocation** | : | Karnataka State Anthem | 10:30 am | **5 min** |
| **Welcome Address** | : | **Prof. M.S. Chandrashekara**<br>Convener, Centre for Science Education in Schools | 10:35 am | **5 min** |
| **Inauguration by Watering sampling** | : | **Prof. N. K Lokanath,**<br>Hon' V C, University of Mysore | 10:40 am | **5 min** |
| **Inaugural speech** | : | **Prof. N. K Lokanath,**<br>Hon' V C, University of Mysore | 10:45 am | **10 min** |
| **Chief Guest Address** | : | **Smt. Bharathi**<br>Joint Director, Department of Education | 10:55 am | **10 min** |
| **Chief Guest Address** | : | **Shri. Ramachandra Raje Urs**<br>DDPI, Department of Education | 11:05 am | **10 min** |
| **Presidential Remarks** | : | **Prof. P. Venkataramaiah**<br>Former Vice Chancellor, Kuvempu University<br>& Chairman, CSES, UoM | 11:15 am | **10 min** |
| **Vote of thanks** | : | **Dr. Bhagyalakshmi,**<br>Retired Scientist, CFTRI, Mysure | 11:25 am | **5 min** |
| **National Anthem** | | | | |
| **Group Photo** | | | | |
| **High Tea** | | | | |

Scanned with OKEN Scanner

ಇಂದಿನ ಕಾರ್ಯಕ್ರಮದ ಬಗ್ಗೆ:

ಮೈಸೂರು ಜಿಲ್ಲೆಯ ಆಯ್ದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ದಿನಾಂಕ 19-6-2023 ರಿಂದ 24-6-2023ರವರೆಗೆ **'ವಿಜ್ಞಾನ ಕಲಿಕಾ ಸ್ಪಂದನ ಶಿಬಿರ'**ವನ್ನು ಮಾನಸಗಂಗೋತ್ರಿಯಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲೆಯ ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಒಂದು ವಾರದ ಕಾಲ ಅವರಿಗೆ ಮಾನಸ ಗಂಗೋತ್ರಿಯ ವಿವಿಧ ವಿಜ್ಞಾನ ವಿಭಾಗಗಳಿಗೆ ಭೇಟಿನೀಡಲು ಅವಕಾಶ ಮಾಡಿಕೊಟ್ಟು ಅವರ ಕಲಿಕೆಯನ್ನು ಉತ್ತೇಜನಗೊಳಿಸಲು ಮತ್ತು ವಿಜ್ಞಾನ ವಿಷಯಗಳ ಕುರಿತು ಆಸಕ್ತಿ ಹೆಚ್ಚಿಸಲು ತೀರ್ಮಾನಿಸಲಾಗಿದೆ. ಈ ಆಶಯದಿಂದ ದಿನಾಂಕ: **19-6-2023** ರಿಂದ **24-6-2023**ರವರೆಗೆ **'ವಿಜ್ಞಾನ ಕಲಿಕಾ ಸ್ಪಂದನ ಶಿಬಿರ'**ವನ್ನು ಮೈಸೂರು ವಿಶ್ವ ವಿದ್ಯಾನಿಲಯದ, ಭೌತವಿಜ್ಞಾನ ವಿಭಾಗದಲ್ಲಿ ಆಯೋಜಿಸಲಾಗಿದೆ. ಶಿಕ್ಷಣ ಇಲಾಖೆಯ ಮೂಲಕ ಸರ್ಕಾರಿ ಪ್ರೌಢಶಾಲೆಗಳಲ್ಲಿ ಓದುತ್ತಿರುವ 30 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಈ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಶಿಬಿರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಒಂದು ವಾರಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಜ್ಞಾನ ವಿಭಾಗಗಳಿಗೆ (ಗಣಿತ, ಭೌತ ವಿಜ್ಞಾನ, ರಸಾಯನ ವಿಜ್ಞಾನ, ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ಕಂಪ್ಯೂಟರ್ ವಿಜ್ಞಾನ, ಮನೋವಿಜ್ಞಾನ ಮತ್ತು ರೇಷ್ಮೆ) ಭೇಟಿ ನೀಡಿ ಸಂಶೋಧನಾ ಪ್ರಯೋಗಾಲಯಗಳನ್ನು ಪರಿಚಯ ಮಾಡಿಸಲಾಗುವುದು. ಅಲ್ಲಿನ ಪ್ರಾಧ್ಯಾಪಕರುಗಳು ಮತ್ತು ಸಂಶೋಧಕರು ಮಾರ್ಗದರ್ಶನದಲ್ಲಿ ಸರಳ ಪ್ರಯೋಗಗಳನ್ನು ಮಾಡುವುದರ ಜೊತೆಗೆ ಹೆಚ್ಚಿನ ವೈಜ್ಞಾನಿಕ ಮಾಹಿತಿಯನ್ನು ಪಡೆದುಕೊಳ್ಳಬಹುದು. ಶಿಬಿರಾರ್ಥಿಗಳಿಗಾಗಿ ಪ್ರಾರ್ಥನೆ, ಯೋಗ, ಪರಿಣಿತರಿಂದ ಉಪನ್ಯಾಸ, ಸಂವೇದನಾ ಕಾರ್ಯಕ್ರಮ, ಪ್ರಾಯೋಗಿಕ ಆಧಾರದ "ಮಾಡಿ ಕಲಿಯಲು, ನೋಡಿ ತಿಳಿದುಕೊಳ್ಳಲು" ಅವಕಾಶವಿದೆ. ಸಂಜೆಯ ಕಾರ್ಯಕ್ರಮದಲ್ಲಿ ಆಟ, ಆಟದೊಂದಿಗೆ ವಿಜ್ಞಾನ ಜ್ಞಾನ, ನಕ್ಷತ್ರ ಹಾಗೂ ಗ್ರಹಗಳ ವೀಕ್ಷಣೆಗೆ ಮತ್ತು ಪರಿಣಿತರೊಡನೆ ಪಕ್ಷಿ ವೀಕ್ಷಣೆಗೂ ಅವಕಾಶವನ್ನು ಕಲ್ಪಿಸಲಾಗಿದೆ. ಇದಲ್ಲದೆ ವಿದ್ಯಾರ್ಥಿಗಳಿಗೆ ತಮ್ಮ ಸ್ವಪ್ರತಿಭೆಯನ್ನು ವಿನಿಮಯ ಮಾಡಿಕೊಳ್ಳಲು ಅವಕಾಶವಿರುತ್ತದೆ. ಈ ಕಾರ್ಯಕ್ರಮವನ್ನು "ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರದ ಅಧ್ಯಕ್ಷರಾದ ಪ್ರೊ. ಪಿ.ವೆಂಕಟರಾಮಯ್ಯ ಮತ್ತು ಇದರ ಸಂಚಾಲಕರಾದ ಭೌತವಿಜ್ಞಾನ ಪ್ರಾಧ್ಯಾಪಕ ಪ್ರೊ. ಎಂ.ಎಸ್.ಚಂದ್ರಶೇಖರ ರವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಈ ಕಾರ್ಯಕ್ರಮವು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಮ್ಮ ದೇಶದ ಮತ್ತು ಹೊರದೇಶಗಳ ಪ್ರತಿಷ್ಠಿತ ವಿಶ್ವ ವಿದ್ಯಾನಿಲಯಗಳು ಮತ್ತು ವೈಜ್ಞಾನಿಕ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಮಾಡಲು ಮಾರ್ಗದರ್ಶನ ಮತ್ತು ಪ್ರೇರಣೆಯನ್ನು ನೀಡಲಿದೆ. ಶಿಬಿರಾರ್ಥಿಗಳಿಗೆ ಮಾನಸ ಗಂಗೋತ್ರಿಯ ಯೂತ್ ಹಾಸ್ಟಲ್ ನಲ್ಲಿ ವಸತಿಯನ್ನು ಕಲ್ಪಿಸಲಾಗಿದೆ.

Scanned with OKEN Scanner

ಮೈಸೂರು ಜಿಲ್ಲೆಯ ಆಯ್ದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ದಿನಾಂಕ ೧೯-೬-೨೦೨೩ ರಿಂದ ೨೪-೬-೨೦೨೩ರವರೆಗೆ **'ವಿಜ್ಞಾನ ಕಲಿಕಾ ಸ್ಪಂದನ ಶಿಬಿರ'** ವನ್ನು ಮಾನಸಗಂಗೋತ್ರಿಯಲ್ಲಿ ಆಯೋಜಿಸಲಾಗಿದೆ. ಶಾಲೆಗಳಲ್ಲಿ ವಿಜ್ಞಾನಾಭಿವೃದ್ಧಿ ಸಮಿತಿಯ (Committee for the Development of Science in Schools, CDSS) ಹಿನ್ನೆಲೆ:

ನಮಗೆ ತಿಳಿದಿರುವಂತೆ 1980ರ ದಶಕದಿಂದೀಚೆಗೆ ಪ್ರೌಢಶಾಲೆಯ ಶಿಕ್ಷಣದ ನಂತರ ಪಿ.ಯು.ಸಿ ಹಂತದಲ್ಲಿ ವಿಜ್ಞಾನ ವಿಷಯಗಳನ್ನು ಆಯ್ದುಕೊಂಡು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಉನ್ನತ ಶಿಕ್ಷಣ ಮಟ್ಟದಲ್ಲಿಯೂ ಮೂಲ ವಿಜ್ಞಾನ ವಿಷಯವನ್ನು ಆಯ್ದುಕೊಳ್ಳುವ ಪ್ರತಿಭಾವಂತ ವಿದ್ಯಾರ್ಥಿಗಳ ಸಂಖ್ಯೆಯೂ ಸಹ ಕಡಿಮೆಯಾಗುತ್ತ ಬರುತ್ತಿದೆ. ಈ ಸಮಸ್ಯೆ ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿರದೆ, ಇಡೀ ದೇಶದ ಹಾಗೂ ಜಗತ್ತಿನಾದ್ಯಂತ ಕಂಡುಬರುತ್ತಿರುವ ಸಮಸ್ಯೆಯೂ ಹೌದು.

ಇದಕ್ಕೆ ಹಲವಾರು ಕಾರಣಗಳನ್ನು ನಾವು ಗುರುತಿಸಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳು ಪ್ರಾರಂಭವಾಗುತ್ತಿರುವುದು ಒಂದು ಪ್ರಮುಖ ಕಾರಣ. ಮತ್ತೊಂದು ಪ್ರೌಢಶಾಲೆಯ ಹಂತದಲ್ಲಿ ವಿಜ್ಞಾನ ಮತ್ತು ಗಣಿತ ವಿಷಯಗಳು ಅಧ್ಯಯನ ಮಾಡಲು ಬಹಳ ಕಠಿಣ ಎಂಬ ತಪ್ಪು ಮಾಹಿತಿ ಮಕ್ಕಳು ಮತ್ತು ಪೋಷಕರಲ್ಲಿ ರವಾನೆಯಾಗಿರುವುದು. ಇವೆರಡರ ಜೊತೆಗೆ ಮೂಲ ವಿಜ್ಞಾನವನ್ನು ಕಲಿತ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಮ್ಮ ದೇಶದ ಮತ್ತು ಹೊರದೇಶಗಳ ಅನೇಕ ಸಂಶೋಧನಾ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಕೈಗಾರಿಕೆಗಳಲ್ಲಿ ಲಭ್ಯವಿರುವ ಉನ್ನತ ಮಟ್ಟದ ಉದ್ಯೋಗಾವಕಾಶಗಳ ಮಾಹಿತಿಯ ಕೊರತೆ ಇದೆ.

ವಿಜ್ಞಾನ ಕಲಿಕೆ ಸರಳವೂ, ಆಕರ್ಶಕವೂ ಮತ್ತು ಸಂತೋಷದಾಯಕವೂ ಆಗಿದೆ ಎಂಬುದನ್ನು ಶಾಲಾ ಮಕ್ಕಳಲ್ಲಿ ತಿಳಿ ಹೇಳಿ ಅವರಲ್ಲಿ ವಿಜ್ಞಾನ ಕಲಿಕೆಗೆ ಆಸಕ್ತಿ ಮೂಡಿಸುವ ದೃಷ್ಟಿಯಿಂದ ಮತ್ತು ಮೂಲ ವಿಜ್ಞಾನದಲ್ಲಿ ಬಿ.ಎಸ್ಸಿ ಪದವಿಯ ಆಕಾಂಕ್ಷಿಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯವು 2006 ರಲ್ಲಿ 'ಶಾಲೆಗಳಲ್ಲಿ ವಿಜ್ಞಾನಾಭಿವರ್ಧನಾ ಸಮಿತಿಯನ್ನು' ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಪಿ.ವೆಂಕಟರಾಮಯ್ಯ, ನವರ ಅಧ್ಯಕ್ಷತೆಯಲ್ಲಿ ರಚಿಸಿತು. ದಿನಾಂಕ 20, ಸೆಪ್ಟೆಂಬರ್ 2006 ರಂದು ಆಗಿನ ಕುಲಪತಿಗಳಾಗಿದ್ದ **ಪ್ರೊ.ಜೆ.ಶಶಿಧರ ಪ್ರಸಾದ್** ಅವರು ಸಮಿತಿಯ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಚಾಲನೆ ನೀಡಿದರು.

ಆರಂಭದಲ್ಲಿ ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳ 21 ಪ್ರೌಢಶಾಲೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಪ್ರತಿ ಶಾಲೆಗೂ ಮಾನಸ ಗಂಗೋತ್ರಿ, ಯುವರಾಜ ಕಾಲೇಜು, ಮಹರಾಣಿ ವಿಜ್ಞಾನ ಕಾಲೇಜು, ಜೆ.ಎಸ್.ಎಸ್ ಕಾಲೇಜು ಮತ್ತು ಇತರೆ ಕಡೆಗಳಿಂದ ತಲಾ ಮೂರು ಮಂದಿ ವಿಜ್ಞಾನ ಪ್ರಾಧ್ಯಾಪಕರುಗಳನ್ನು ಕರೆದುಕೊಂಡು ಹೋಗಿ ವಿಜ್ಞಾನ ಕಲಿಕೆಯಲ್ಲಿ ಆಸಕ್ತಿ ಮೂಡಿಸುವ ಉಪನ್ಯಾಸ, ಪ್ರಾತ್ಯಕ್ಷಿಕತೆ ಮತ್ತು ಸರಳ ಪ್ರಯೋಗಗಳನ್ನು ಮಾಡಿ ಅವರಲ್ಲಿ ವಿಜ್ಞಾನ ಕಲಿಯಬೇಕೆಂಬ ಮನೋಭಾವನೆಯನ್ನು ಬೆಳೆಸುವ ಪ್ರಯತ್ನವನ್ನು ಮಾಡಲಾಯಿತು.

ಉಪನ್ಯಾಸ ಕಾರ್ಯಕ್ರಮದ ಜೊತೆಗೆ ಮಕ್ಕಳಿಗೆ ವಿಜ್ಞಾನ ವಿಷಯಗಳ ಕುರಿತು ವಾಕ್ ಚಾತುರ್ಯ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ವಿಜ್ಞಾನ ಮಾದರಿಗಳನ್ನು ತಯಾರಿಸುವ ಸ್ಪರ್ದೆ ಮತ್ತು ವಸ್ತು ಪ್ರದರ್ಶನ ಸ್ಪರ್ಧೆಗಳನ್ನು ನಡೆಸಿ ಬಹುಮಾನ ನೀಡುವುದು, ವಿಜ್ಞಾನ ಅಧ್ಯಾಪಕರುಗಳಿಗೆ ಪ್ರಶಿಕ್ಷಣ ನೀಡುವುದು ಮತ್ತು ಪ್ರತಿ ಶಾಲೆಯಿಂದ ಆಯ್ದ ವಿದ್ಯಾರ್ಥಿಗಳಿಗೆ ಒಂದು ವಾರದ ಕಾಲ ಮಾನಸಗಂಗೋತ್ರಿಯಲ್ಲಿ ಸಮಿತಿಯ ವತಿಯಿಂದಲೇ ಪ್ರಯಾಣ, ಊಟ, ವಸತಿ ಸೌಕರ್ಯಗಳನ್ನು ನೀಡಿ ಅವರಿಗೆ ಬೆಳಗಿನ ಹೊತ್ತು ತಜ್ಞರಿಂದ ಉಪನ್ಯಾಸ ಮತ್ತು ಮಧ್ಯಾಹ್ನದ ವೇಳೆಯಲ್ಲಿ ಮಾನಸಗಂಗೋತ್ರಿಯ ವಿಜ್ಞಾನ ವಿಭಾಗಗಳಿಗೆ ಭೇಟಿ

Scanned with OKEN Scanner

ಮಾಡಿಸಿ ಪ್ರಯೋಗಾಲಯಗಳಲ್ಲಿ ಪ್ರಾಧ್ಯಾಪಕರುಗಳ ಮಾರ್ಗದರ್ಶನದಲ್ಲಿ hands on training ಕೊಡಿಸಲಾಗಿದೆ.

ಈ ಶೈಕ್ಷಣಿಕ ವರ್ಷದಲ್ಲಿ ಮೊದಲಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ವಿಜ್ಞಾನ ಮತ್ತು ಗಣಿತ ಬೋಧಿಸುವ ಅಧ್ಯಾಪಕರುಗಳಿಗೆ ಎರಡು ದಿನಗಳ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಸಿ.ಡಿಎಸ್.ಎಸ್.ನ ಎಲ್ಲ ಕಾರ್ಯಕ್ರಮಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿಂದಿನ ಎಲ್ಲ ಅಧಿಕಾರಿಗಳು ಮತ್ತು ಈಗಿನ ಜಂಟಿ ನಿರ್ದೇಶಕರು ಮತ್ತು ಉಪನಿರ್ದೇಶಕರುಗಳು ಈ ಕಾರ್ಯಕ್ರಮಗಳಿಗೆ ಎಲ್ಲ ಬಗೆಯ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ.

ಮೈಸೂರು ನಗರ ಮತ್ತು ಹತ್ತಿರದ ಊರುಗಳ ಪ್ರೌಢಶಾಲೆಗಳ ಮಕ್ಕಳಿಗೆ ಪ್ರತಿ ತಿಂಗಳ ಮೊದಲ ಶನಿವಾರದಲ್ಲಿ 'ವಿಜ್ಞಾನ ಸಂವಾದ' ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ವಿದ್ಯಾರ್ಥಿಗಳು ವಿವಿಧ ವಿಷಯಗಳ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ಪ್ರಶ್ನೆಗಳನ್ನು ಕೇಳಿ ಸೂಕ್ತ ಉತ್ತರ ಪಡೆಯುವ ಈ ವಿಶಿಷ್ಟ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. 'ವಿಜ್ಞಾನ ಸಂವಾದ' ಕಾರ್ಯಕ್ರಮದ ಸಫಲತೆಯನ್ನು ಗಮನಿಸಿದ ಸಮಿತಿಯು ಮಕ್ಕಳು ಕೇಳುವ ಪ್ರಶ್ನೆಗಳಿಗೆ ಪರಿಣಿತರಿಂದ ಉತ್ತರಗಳನ್ನು ಬರೆಸಿ ಆಂದೋಲನ ದಿನಪತ್ರಿಕೆಯ ಭಾನುವಾರದ ಸಂಚಿಕೆ 'ಹಾಡು ಪಾಡು'ವಿನಲ್ಲಿ 2010 ರಿಂದ 2014ರವರೆಗೆ ಪ್ರಕಟಿಸಲಾಗಿದೆ. ಹೀಗೆ ಪ್ರಕಟವಾಗಿರುವ ಉಪಯುಕ್ತ ಲೇಖನಗಳನ್ನು ಪುಸ್ತಕ ರೂಪದಲ್ಲಿ ಹೊರತರಲು ಆಲೋಚಿಸಿದ್ದೇವೆ. ಈ ಪುಸ್ತಕವು ವಿದ್ಯಾರ್ಥಿಗಳು ಮತ್ತು ಶಿಕ್ಷಕರುಗಳಿಗೆ ಉಪಯುಕ್ತ ಕೈಪಿಡಿಯಾಗುವುದೆಂದು ಆಶಿಸಲಾಗಿದೆ.

ಶಾಲೆಗಳಲ್ಲಿ ವಿಜ್ಞಾನಾಭಿವೃದ್ಧಿ ಸಮಿತಿಯನ್ನು (Committee for the Development of Science in Schools, CDSS) ಈಗ "ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರದ" ಎಂದು ಮರುನಾಮಕರಣ ಮಾಡಲಾಗಿದೆ. ಇದರ ಮೂಲಕ ಪ್ರಮುಖ ಅಂಶವಾಗಿ ಸಂಚಾರಿ ವಿಜ್ಞಾನ ಪ್ರಯೋಗಾಲದ ಮೂಲಕ ಮೈಸೂರು ಜಿಲ್ಲೆಯ ಗ್ರಾಮಾಂತರ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಜ್ಞಾನ ವಿಷಯಗಳ ಕುರಿತು ಮಾನಸಗಂಗೋತ್ರಿಯ ಸಂಶೋಧಕರ ಮೂಲಕ ತರಬೇತಿಯನ್ನು ನೀಡಲಾಗುತ್ತಿದೆ. ಇದು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತೇಜನಗೊಳಿಸಿ ಅವರಿಗೆ ವಿಜ್ಞಾನ ವಿಷಯಗಳ ಕುರಿತು ಆಸಕ್ತಿ ಮೂಡಿಸುತ್ತಿದೆ. ಸಂಚಾರಿ ವಿಜ್ಞಾನ ಪ್ರಯೋಗಾಲಯದ ಜೊತೆಗೆ ಅಲ್ಲಿಗೆ ತೆರಳುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳು ವಿದ್ಯಾರ್ಥಿಗಳೊಡನೆ ವಿಜ್ಞಾನ ಸಂವಾದ ಕಾರ್ಯಕ್ರಮದ ಮೂಲಕ ಮಕ್ಕಳಲ್ಲಿರಬಹುದಾದ ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಕುರಿತಾದ ಸಂದೇಹಗಳನ್ನು ಪರಿಹರಿಸಿ ಅವರ ಕಲಿಕೆ ಮತ್ತು ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ ಮತ್ತು ವಿಜ್ಞಾನಿಗಳಾಗಲು ಹುರಿದುಂಬಿಸುತ್ತಿದ್ದಾರೆ.

Scanned with OKEN Scanner



Scanned with OKEN Scanner